# All India Radio: Bangalore
# National Bulletin In Kannada
# 17.12.2025  19.35 p.m.

## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಪರಮಾಣು ಶಕ್ತಿಯ ಸುಸ್ಥಿರ ಬಳಕೆ ಮತ್ತು ಪ್ರಗತಿ ವಿಧೇಯಕ ೨೦೨೫ ಲೋಕಸಭೆಯಲ್ಲಿ ಅಂಗೀಕಾರ

೨. ಭಾರತ-ಇಥಿಯೋಪಿಯಾ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುತ್ತಿವೆ - ಪ್ರಧಾನಿ ನರೇಂದ್ರ ಮೋದಿ

೩. ಮುಂದಿನ ವರ್ಷಾಂತ್ಯದೊಳಗೆ ಟೋಲ್ ಸಂಗ್ರಹಕ್ಕೆ ಸ್ವಯಂ ಚಾಲಿತ ನಂಬರ್ ಪ್ಲೇಟ್ ಗುರುತಿಸುವ ವ್ಯವಸ್ಥೆ ಜಾರಿ

೪. ಇದೇ ೨೨ರವರೆಗೆ ಹೈದರಾಬಾದ್‌ನಿಂದ ಕಾರ್ಯನಿರ್ವಹಿಸಲಿರುವ ರಾಷ್ಟ್ರಪತಿ ಕಚೇರಿ

೫. ದೇಶಾದ್ಯಂತ ೫ಜಿ ಸೇವೆಯು ಶೇಕಡ ೯೯ ರಷ್ಟು ಜಿಲ್ಲೆಗಳಲ್ಲಿ ಲಭ್ಯ - ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಲೋಕಸಭೆಯಲ್ಲಿ ಸ್ಪಷ್ಟನೆ

೬. ಹವಾಮಾನ ವೈಪರೀತ್ಯ ಹಿನ್ನೆಲೆ ಭಾರತ-ದಕ್ಷಿಣ ಆಫ್ರಿಕಾ ನಡುವಿನ ಟಿ-೨೦ ನಾಲ್ಕನೇ ಪಂದ್ಯ ವಿಳಂಬ

***************

ಪರಮಾಣು ಶಕ್ತಿಯ ಸುಸ್ಥಿರ ಬಳಕೆ ಮತ್ತು ಪ್ರಗತಿ ವಿಧೇಯಕ ೨೦೨೫ ಅನ್ನು ಲೋಕಸಭೆ ಅಂಗೀಕರಿಸಿದೆ.

ಜನರ ಕಲ್ಯಾಣಕ್ಕಾಗಿ ಪರಮಾಣು ವಿದ್ಯುತ್ ಉತ್ಪಾದನೆಗಾಗಿ ಪರಮಾಣು ಶಕ್ತಿ ಮತ್ತು ಅಯಾನೀಕರಿಸುವ ವಿಕಿರಣವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಈ ಮಸೂದೆ ಹೊಂದಿದೆ. ಅದರ ಸುರಕ್ಷಿತ ಬಳಕೆಗಾಗಿ ಇದು ದೃಢವಾದ ನಿಯಂತ್ರಕ ಚೌಕಟ್ಟನ್ನು ಒದಗಿಸಲು ಸಹ ಪ್ರಯತ್ನಿಸುತ್ತದೆ. ಪರಮಾಣು ಶಕ್ತಿ ನಿಯಂತ್ರಣ ಮಂಡಳಿಯನ್ನು ರಚಿಸಲು ಮತ್ತು ಪರಮಾಣು ಶಕ್ತಿ ಪರಿಹಾರ ಸಲಹಾ ಮಂಡಳಿಯನ್ನು ಸ್ಥಾಪಿಸಲು ಮಸೂದೆ ಪ್ರಯತ್ನಿಸುತ್ತದೆ. ಪರಮಾಣು ಘಟನೆಯ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಹೊಣೆಗಾರಿಕೆಯನ್ನು ಸಹ ಮಸೂದೆ ಒದಗಿಸುತ್ತದೆ.

***************

ಹೆಚ್ಚು ಸಮಾನ ಮತ್ತು ಹೆಚ್ಚು ಶಾಂತಿಯುತ ಜಗತ್ತನ್ನು ಸೃಷ್ಟಿಸಲು ಭಾರತ ಮತ್ತು ಇಥಿಯೋಪಿಯಾ ಒಂದೇ ಕುಟುಂಬದ ಸದಸ್ಯರಾಗಿ ಒಟ್ಟಾಗಿ ನಿಂತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಇಂದು ಹೇಳಿದ್ದಾರೆ. ಇಂದು ಬೆಳಿಗ್ಗೆ ಇಥಿಯೋಪಿಯಾ ಸಂಸತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಅವರು, ಜಾಗತಿಕ ದಕ್ಷಿಣವು ತನ್ನದೇ ಆದ ಭವಿಷ್ಯವನ್ನು ರೂಪಿಸಿಕೊಳ್ಳುತ್ತಿದೆ. ಭಾರತ ಮತ್ತು ಇಥಿಯೋಪಿಯಾ ಅದಕ್ಕಾಗಿ ಒಂದು ದೃಷ್ಟಿಕೋನವನ್ನು ಹಂಚಿಕೊಂಡಿವೆ ಮತ್ತು ಜಾಗತಿಕ ದಕ್ಷಿಣವು ಯಾರ ವಿರುದ್ಧವೂ ಅಲ್ಲ, ಎಲ್ಲರ ಪರವಾಗಿದೆ ಎಂದು ಪ್ರಧಾನಿ ಹೇಳಿದರು.

ಎರಡು ದೇಶಗಳ ನಡುವಿನ ಪ್ರಾಚೀನ ಸಂಬಂಧವನ್ನು ಒತ್ತಿ ಹೇಳಿದ ಪ್ರಧಾನಿ ಮೋದಿ, ಎರಡೂ ಪ್ರಾಚೀನ ನಾಗರಿಕತೆಗಳು ಒಟ್ಟಾಗಿ ನಿಂತಿರುವುದರಿಂದ ಸೌಹಾರ್ದತೆಯ ಶಕ್ತಿ ಮತ್ತು ಸಹಕಾರದ ಬಲ ಹೆಚ್ಚಿದೆ. ಕಳೆದ ಹನ್ನೊಂದು ವರ್ಷಗಳಲ್ಲಿ ಎರಡೂ ದೇಶಗಳ ನಡುವೆ ಸಂಪರ್ಕವು ಹಲವು ಪಟ್ಟು ಹೆಚ್ಚಾಗಿದೆ ಎಂದು ಅವರು ಹೇಳಿದರು.  ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇಥಿಯೋಪಿಯಾದ ಅತ್ಯುನ್ನತ ಪ್ರಶಸ್ತಿಯಾದ 'ದಿ ಗ್ರೇಟ್ ಆನರ್ ನಿಶಾನ್ ಆಫ್ ಇಥಿಯೋಪಿಯಾ'ವನ್ನು ಇಥಿಯೋಪಿಯಾದ ಪ್ರಧಾನಿ ಡಾ. ಅಬಿ ಅಹ್ಮದ್ ಅಲಿ ಅವರು ನೀಡಿ ಗೌರವಿಸಿದರು.

***************

ನಾಳೆ ಪ್ರಧಾನಿ ನರೇಂದ್ರ ಮೋದಿ ಮತ್ತು ಓಮನ್ ಸುಲ್ತಾನ್ ಅವರ ಸಮ್ಮುಖದಲ್ಲಿ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ-ಸಿಇಪಿಎ, ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಮಾಡಲಾಗುವುದು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ.

ಇಂದು ಮಸ್ಕತ್‌ನಲ್ಲಿ ನಡೆದ ಓಮನ್-ಭಾರತ ವ್ಯವಹಾರ ಸಂವಾದವನ್ನು ಉದ್ದೇಶಿಸಿ ಮಾತನಾಡಿದ ಅವರು, ಒಪ್ಪಂದಕ್ಕೆ ಸಹಿ ಹಾಕುವುದು ಎರಡೂ ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಹೊಸ ಅಧ್ಯಾಯವಾಗಲಿದೆ. ಒಪ್ಪಂದವು

ವಿವಿಧ ಕ್ಷೇತ್ರಗಳಲ್ಲಿ ಅಪಾರ ಅವಕಾಶಗಳನ್ನು ತರುತ್ತದೆ. ಇಂಧನ ಪರಿವರ್ತನೆ, ಮೂಲಸೌಕರ್ಯ, ಆಹಾರ ಭದ್ರತೆ ಮತ್ತು ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆ ಮುಂತಾದ ನಾಲ್ಕು ಪ್ರಮುಖ ವಲಯಗಳು ಪರಸ್ಪರ ಪ್ರಯೋಜನಕಾರಿಯಾಗಲಿವೆ ಎಂದು ಅವರು ಹೇಳಿದರು.

***************

ಸಾಂಪ್ರದಾಯಿಕ ಟೋಲ್ ಸಂಗ್ರಹ ವ್ಯವಸ್ಥೆಯನ್ನು ಬದಲಿಸಲು ಮುಂದಿನ ವರ್ಷದ ಅಂತ್ಯದ ವೇಳೆಗೆ ದೇಶಾದ್ಯಂತ ಸ್ವಯಂಚಾಲಿತ ನಂಬರ್ ಪ್ಲೇಟ್ ಗುರುತಿಸುವಿಕೆ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು ಎಂದು ಹೆದ್ದಾರಿ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಇಂದು ರಾಜ್ಯಸಭೆಯಲ್ಲಿ ಪೂರಕ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹೆದ್ದಾರಿಗಳಲ್ಲಿ ವಾಹನಗಳ ದಕ್ಷತೆಯನ್ನು ಹೆಚ್ಚಿಸಲು ಮತ್ತು ಸಾರಿಗೆ ಸಮಯವನ್ನು ಕಡಿಮೆ ಮಾಡಲು ಸರ್ಕಾರ ಇದನ್ನು ಜಾರಿಗೆ ತರುತ್ತಿದೆ ಎಂದು ಹೇಳಿದರು. ಈ ವ್ಯವಸ್ಥೆಯನ್ನು ಜಾರಿಗೆ ತಂದ ನಂತರ ಸುಮಾರು ಒಂದು ಸಾವಿರದ ೫೦೦ ಕೋಟಿ ರೂಪಾಯಿಗಳ ಇಂಧನ ಉಳಿತಾಯವಾಗಲಿದೆ. ಟೋಲ್ ವಂಚನೆಯನ್ನು ತಪ್ಪಿಸಲಾಗುವುದು ಮತ್ತು ಇದು ಸರ್ಕಾರಕ್ಕೆ ಆರು ಸಾವಿರ ಕೋಟಿ ಆದಾಯವನ್ನು ತರುತ್ತದೆ ಎಂದು ಅವರು ಮಾಹಿತಿ ನೀಡಿದರು.

***************

ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಮಧ್ಯಾಹ್ನ ಹೈದರಾಬಾದ್‌ನ ಹಕಿಂಪೇಟ್ ವಿಮಾನ ನಿಲ್ದಾಣಕ್ಕೆ ಆಗಮಿಸಿದರು. ರಾಷ್ಟ್ರಪತಿಗಳು ವಾರ್ಷಿಕ ದಕ್ಷಿಣ ಪ್ರವಾಸದಲ್ಲಿ ಆಂಧ್ರಪ್ರದೇಶದ ತಿರುಪತಿಯಿಂದ ಆಗಮಿಸಿ ಸಿಕಂದರಾಬಾದ್‌ನ ಬೋಲಾರಮ್‌ನಲ್ಲಿರುವ ರಾಷ್ಟ್ರಪತಿ ನಿಲಯಕ್ಕೆ ತೆರಳಿದರು. ರಾಷ್ಟ್ರಪತಿಗಳ ಕಚೇರಿ, ಇದೇ ೨೨ ರವರೆಗೆ ರಾಷ್ಟ್ರಪತಿ ನಿಲಯದಿಂದ ಕಾರ್ಯನಿರ್ವಹಿಸಲಿದೆ. ಇದೇ ೧೯ ರಂದು ರಾಜ್ಯ ಸಾರ್ವಜನಿಕ ಸೇವಾ ಆಯೋಗಗಳ ಅಧ್ಯಕ್ಷರ ರಾಷ್ಟ್ರೀಯ ಸಮ್ಮೇಳನವನ್ನು ರಾಷ್ಟ್ರಪತಿ ಉದ್ಘಾಟಿಸಲಿದ್ದಾರೆ. ಇದೇ ೨೦ ರಂದು ಗಚಿಬೌಲಿಯಲ್ಲಿ ಬ್ರಹ್ಮ ಕುಮಾರಿಯರು ಆಯೋಜಿಸಿರುವ ಭಾರತದ ಕಾಲಾತೀತ ಜ್ಞಾನ - ಶಾಂತಿ ಮತ್ತು ಪ್ರಗತಿಯ ಹಾದಿಗಳು ಎಂಬ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

***************

೨೦೨೨ ರಲ್ಲಿ ಪ್ರಾರಂಭವಾದ ೫ಜಿ ಸೇವೆಯು ಪ್ರಸ್ತುತ ದೇಶದ ೯೯.೯ ಪ್ರತಿಶತ ಜಿಲ್ಲೆಗಳಲ್ಲಿ ಲಭ್ಯವಿದೆ ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಇಂದು ಲೋಕಸಭೆಯಲ್ಲಿ ತಿಳಿಸಿದ್ದಾರೆ. ಒಟ್ಟು ಬೇಸ್ ಟ್ರಾನ್ಸ್‌ಸಿವರ್ ಸ್ಟೇಷನ್‌ಗಳ ಸಂಖ್ಯೆ ೬ ಲಕ್ಷದ ೪೯ ಸಾವಿರದ ೮೩೪ ರಿಂದ ೩೧ ಲಕ್ಷದ ೪೪ ಸಾವಿರದ ೫೪೯ ಕ್ಕೆ ಏರಿದೆ ಎಂದು ಅವರು ಹೇಳಿದರು. ಹಳ್ಳಿಗಳಲ್ಲಿನ ಮೊಬೈಲ್ ವ್ಯಾಪ್ತಿಯು ೨೦೧೪ ರಲ್ಲಿದ್ದ ಶೇಕಡ ೯೦.೬೮ ರಿಂದ ಅಕ್ಟೋಬರ್ ೨೦೨೫ರ ವೇಳೆಗೆ ಶೇಕಡ ೯೮.೪೩ಕ್ಕೆ ಸುಧಾರಿಸಿದೆ ಎಂದು ಸಚಿವರು ಸದನಕ್ಕೆ ಮಾಹಿತಿ ನೀಡಿದರು. ಇದು ದೇಶದ ೬,೩೪,೦೧೯ ಹಳ್ಳಿಗಳನ್ನು ತಲುಪಿದೆ ಎಂದು ಮಾಹಿತಿ ನೀಡಿದರು.

***************

ವಿವಿಧ ಸುರಕ್ಷತಾ ಕ್ರಮಗಳ ಪರಿಣಾಮವಾಗಿ, ರೈಲು ಅಪಘಾತಗಳ ಸಂಖ್ಯೆಯಲ್ಲಿ ತೀವ್ರ ಇಳಿಕೆ ಕಂಡುಬಂದಿದೆ. ೨೦೧೪ ರಿಂದ ೨೦೨೫ ರವರೆಗೆ ಸರ್ಕಾರವು ರೈಲು ಅಪಘಾತಗಳ ಸಂಖ್ಯೆಯನ್ನು ಶೇಕಡ ೯೦ ರಷ್ಟು ಕಡಿಮೆ ಮಾಡಲು ಸಾಧ್ಯವಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಲೋಕಸಭೆಯಲ್ಲಿ ಪೂರಕ ಪ್ರಶ್ನೆಗೆ ಉತ್ತರಿಸಿದ ಅವರು, ಕವಚ್, ರೈಲು ಅಪಘಾತಗಳನ್ನು ತಡೆಗಟ್ಟಲು ವಿನ್ಯಾಸಗೊಳಿಸಲಾದ ಸ್ಥಳೀಯ ಸ್ವಯಂಚಾಲಿತ ರೈಲು ರಕ್ಷಣಾ ವ್ಯವಸ್ಥೆಯಾಗಿದ್ದು, ಈ ಸಂಕೀರ್ಣ ವ್ಯವಸ್ಥೆಯು ಐದು ಪ್ರಮುಖ ವ್ಯವಸ್ಥೆಗಳನ್ನು ಹೊಂದಿದೆ ಎಂದು ಹೇಳಿದರು.

***************

ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರದ ಡೇಟಾಬೇಸ್‌ನಿಂದ ಇಲ್ಲಿಯವರೆಗೆ ಆಧಾರ್ ಕಾರ್ಡ್ ಹೊಂದಿರುವವರ ಡೇಟಾ ಉಲ್ಲಂಘನೆಯಾಗಿಲ್ಲ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ಜಿತಿನ್ ಪ್ರಸಾದ ಲೋಕಸಭೆಯಲ್ಲಿ ಇಂದು ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಸುಮಾರು ೧೩೪ ಕೋಟಿ ಜೀವಂತ ಆಧಾರ್ ಹೊಂದಿರುವವರನ್ನು ಹೊಂದಿರುವ ಆಧಾರ್ ವಿಶ್ವದ ಅತಿದೊಡ್ಡ ಬಯೋಮೆಟ್ರಿಕ್ ಗುರುತಿನ ವ್ಯವಸ್ಥೆಯಾಗಿದೆ. ಇದು ೧೬ ಸಾವಿರ ಕೋಟಿಗೂ ಹೆಚ್ಚು ದೃಢೀಕರಣ ವಹಿವಾಟುಗಳನ್ನು ಪೂರ್ಣಗೊಳಿಸಿದೆ ಎಂದು ಅವರು ಮಾಹಿತಿ ನೀಡಿದರು.

***************

ಹಣಕಾಸಿನ ವಂಚನೆಗಳನ್ನು ತಕ್ಷಣ ವರದಿ ಮಾಡಲು ಮತ್ತು ವಂಚಕರಿಂದ ಹಣವನ್ನು ವಂಚಿಸುವುದು ನಿಲ್ಲಿಸಲು ಪ್ರಾರಂಭಿಸಲಾದ ಸಿಟಿಜನ್ ಫೈನಾನ್ಷಿಯಲ್ ಸೈಬರ್ ಫ್ರಾಡ್ ರಿಪೋರ್ಟಿಂಗ್ ಮತ್ತು ಮ್ಯಾನೇಜ್ಮೆಂಟ್ ಸಿಸ್ಟಮ್

ಮೂಲಕ ಇದುವರೆಗೆ ೨೩ ಲಕ್ಷಕ್ಕೂ ಹೆಚ್ಚು ದೂರುಗಳಲ್ಲಿ ಏಳು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಉಳಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ.

***************

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಐದು ಪಂದ್ಯಗಳ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯ, ಇಂದು ಲಕ್ನೋದ ಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿದೆ. ದಟ್ಟ ಮಂಜಿನ ಹಿನ್ನೆಲೆಯಲ್ಲಿ ಟಾಸ್ ಆಯ್ಕೆ ವಿಳಂಬವಾಗಿದೆ.

*******ಮುಕ್ತಾಯ*******